ಕೊಸರಿ ತಪ್ಪಿಸಿಕೊಂಡು ಹಿಂದೆ ತಿರುಗಿ, "ಈಗೆಲ್ಲಾ ಮುಗೀತು. ಮರತಬಿಡಬೇಕು" ಎಂದು ಸರ್ರನೇ ಬಾಗಿಲ ಬಳಿ ಬಂದಾಗ ಶ್ರೀನಾಥ ನಿಂತಿದ್ದರು.

ಅವನು ನನ್ನನ್ನು ಮರೆತಿಲ್ಲವೆಂಬ ಅರಿವಾಗಿತ್ತು. ಅಮ್ಮನ ಮೂಲಕ ಸುದ್ದಿಗಳು ಬರುತ್ತಿದ್ದವು. "ಚಂದ್ರು ಒಂದೊಂದು ಊರಾಗೂ ಆಸ್ತಿ ಮಾಡ್ಯಾನ. ಮೈಥಿಲಿ ಮೈಮ್ಯಾಲಿನ ವಜ್ರ, ಭಂಗಾರಕ್ಕಂತೂ ಲೆಕ್ಕನ ಇಲ್ಲ" ಇತ್ಯಾದಿಗಳು ತಿಳಿಯುತ್ತಿದ್ದವು. ನನಗೆ ಪ್ರತೀಕ ಹುಟ್ಟಿದ ವರ್ಷದ ನಂತರ ಚಂದ್ರು ಮಗಳ ತಂದೆಯಾಗಿದ್ದ. ಮತ್ತದೇ ಪಲ್ಲಟಗಳು... ನಮಗೆ ಉಡುಪಿಗೆ ವರ್ಗವಾಯಿತು. ಅಪ್ಪ ಹೃದಯಾಘಾತದಿಂದ ತೀರಿಹೋದರು. ಆಗ ಅಮ್ಮನಿಗೆ ಆಸರೆಯಾಗಿದ್ದು ಸರಜಕ್ಕನೇ. ವರ್ಗವಾದಾಗ ಗುರಣ್ಣ ಹೆಂಡತಿ ಮಗನೊಂದಿಗೆ ಬಾಗಲಕೋಟೆಗೆ ಹೋದ. ಜೊತೆಗೆ ಅಮ್ಮನನ್ನೂ ಕರೆದೊಯ್ದ. ಅವರೂ ಬೆಳಗಾವಿ, ಬೀದರ, ಗದಗ... ಎಂದೆಲ್ಲಾ ತಿರುಗಾಡಿದರು. ಗದಗದಲ್ಲಿ ಅಮ್ಮನೂ ಅಪ್ಪನತ್ತ ನಡೆದುಬಿಟ್ಟಳು. ಗುರಣ್ಣ ಹುಬ್ಬಳ್ಳಿಯ ಮನೆ ಮಾರಿ ನನಗೂ ಅರ್ಧ ಭಾಗ ಕೊಟ್ಟ. ಅಲ್ಲಿಗೆ ಅವರ ಸುದ್ದಿ ಬರುವುದು ನಿಂತು ಹೋಗಿ ಕೊಂಡಿ ಕಳಚಿದಂತಾಗಿತ್ತು. ಅದು ಮತ್ತೆ ಬೆಸೆದಿದ್ದು ಈಗಲೇ... ಮೈಥಿಲಿಯ ಫೋನಿನಿಂದ.

ಸರಿಯಾಗಿ ಹನ್ನೊಂದು ಗಂಟೆಗೆ ಫೋನು ಟ್ರಿನ್‌ಗುಟ್ಟಿತು. "ಕೆಲಸಾತ ಪುಷ್ಪಾ?'" ಎನ್ನುತ್ತಲೇ ಮೈಥಿಲಿ ಸಂವಾದ ಆರಂಭಿಸಿದರು. "ಹ್ಞಾಂ ವೈನಿ. ಆತು ನೋಡ್ರಿ. ನೀವು ಹೆಂಗಿದ್ದೀರಿ? ಚಂದ್ರು ಹೆಂಗಿದ್ದಾನ? ನಿಮ್ಮ ಬಗ್ಗೆ ಭಾಳ ಸುದ್ದಿ ಕೇಳಿದ್ದೆ. ಸಂತೋಷಾಗಿತ್ತು..." ಎಂದೆ. "ಏನ್ ಕೇಳಿದ್ದೀ ಹೇಳು?" ಎಂದಿದ್ದು ಮೈಥಿಲಿಯ ಧ್ವನಿ. "ಅದ... ಚಂದ್ರು ರಗಡ ಮನಿ, ಸೈಟು, ಆಸ್ತಿ ಮಾಡಕೊಂಡಾನಂತ. ನಿಮ್ಮನ್ನ ಅಂಗೈಯಾಗ ಹಿಡಕೊಂಡು ನೋಡಕೋತಾನಂತ..." ಎನ್ನುತ್ತಿದ್ದಂತೆ ಮೈಥಿಲಿ ತುಂಡರಿಸಿ, "ಹ್ಞಾಂ... ಆಸ್ತಿ ಮಾಡಕೊಂಡದ್ದೇನೋ ಖರೆ ಅದ. ಆದರ ಅಂಗೈಯಾಗ... ಎಲ್ಲಾ ನಾಟಕಾ ಪುಷ್ಪಾ. ನಿನಗ ಎಲ್ಲಾ ಖರೆ ವಿಷಯ ಹೇಳ್ಲಿಕ್ಕೆ ಟೈಮಿಟಗೊಂಡ ಫೋನು ಮಾಡೇನಿ. ನಾ ಚಂದ್ರುನ ಜೋಡಿ ಮದಿವ್ಯಾದಾಗ ಭಾಳ ಖುಷಿಪಟ್ಟಿದ್ದೆ. ಆದರ ಮದ್ಲೇ ರಾತ್ರಿಗೆ ರಾಹು ಬಡಧಂಗಾಗಿತ್ತು. 'ನಮ್ಮ ನಳಿನಿ ವೈನಿ ಮನಿಗೆ ಹೊಂದಕೊಳ್ಳದನ ಭಾಳ ತ್ರಾಸು ಕೊಟ್ಟಾರ. ಅದಕ್ಕ ನೀನು ನಮ್ಮವ್ವ, ಅಪ್ಪಗ... ಈ ಮನಿಗೆ ಛೊಲೊ ಸೊಸಿ ಅಂತ ಪ್ರೂವ್ ಮಾಡಬೇಕು. ಅನಕಾತ ನಾ ನಿನ್ನ ಮುಟ್ಟಂಗಿಲ್ಲ. ಹೊರಗ ಇದನ್ನ ಹೇಳಬ್ಯಾಡಾ' ಅಂತ ಹೇಳಿದಾಗ ನಾ ಖಂಬಧಂಗ ನಿಂತಬಿಟ್ಟಿದ್ದೆ. ಉಪಾಯ ಇಲ್ಲದನ ಹೊರಗ ಎಲ್ಲಾರ ಮುಂದ ನಾಟಕಾ ಮಾಡಕೋತ ಹೋದೆ. ಬರೋದು... ಹೋಗೋದು... ಕಾರು, ಹೋಟಲ್ಲು... ಎಲ್ಲಾ ತೋರಿಕಿಗೆ... ಧೊಡ್ಡಿಸ್ತನಕ್ಕ. ಒಳಗ... ಏನಿಲ್ಲ. ಮೈ... ಮನಸ್ಸು ಎಲ್ಲಾ ಖಾಲಿ ಖಾಲಿ.

ಆಮ್ಯಾಲೆ ವಸುಮತಿ ನಿಮ್ಮ ವಿಷಯಾನೂ ಹೇಳಿದ್ಲು. ಆದ್ರ ನಾ ಏನೂ ಮಾಡೂವಂಗ ಇದ್ದಿದ್ದಿಲ್ಲಾ. ನಮ್ಮವ್ವ ಹಾರ್ಟ್ ಪೇಷಂಟ್. ನಾ ಏನರೆ ಬ್ಯಾರೇ ವಿಚಾರ ಮಾಡಿದ್ರ ಅಕಿ ತಡಕೋತಿರಲಿಲ್ಲಾ. ಅದಕ್ಕ ಸುಮ್ಮನಿದ್ದೆ. ಮುಂದ ನಿನ್ನ ಮದವಿ ಆಗೂತನಕಾ ನಮ್ಮ ನಡುವ ಸಂಪರ್ಕ ಇರಲಿಲ್ಲಾ. ನಿನ್ನ ಮದಿವ್ಯಾದ ಕೂಡ್ಲೆ ನಿನಗಿಂತ ಮದ್ಲ ಮಕ್ಕಳಾಗಬೇಕಂತ ಈರ್ಷಾ, ಸ್ಪರ್ಧಾದ್ಲೇ ನಮ್ಮ ಸಂಸಾರ ಸುರುವಾತು. ಖರೆ ನಿನ್ನ ಮಗಾ ಹುಟ್ಟಿ ವರ್ಷದ ಮ್ಯಾಲೆ ನನಗ ಸ್ನಿಗ್ಧಾ ಹುಟ್ಟಿದ್ಲು. ಅವರಿಗದು ಚುಚ್ಚತಿತ್ತು. ಆಮ್ಯಾಲೆ ನನಗ ಎರಡು ಅಬಾರ್ಷನ್‌ಗೊಳಾಗಿ ಡಾಕ್ಟರ್, 'ಇನ್ನ ಪ್ರಯತ್ನ ಮಾಡಬ್ಯಾಡ್ರಿ' ಅಂದಬಿಟ್ರು. ಅವರಿಗೆ ಗಂಡಿನಾಶಾ ಇತ್ತು. 'ಇಷ್ಟ ಆಸ್ತಿ ಎಲ್ಲಾ ಯಾರಿಗೆ?' ಅಂತ ಕಿರಿಕಿರಿ ಮಾಡಿದ್ರು. ಆಮ್ಯಾಲೆ ತಾವ ಸುಮ್ಮನಾದ್ರು. ಮುಂದ ನನ್ ಜೋಡಿ ಛೊಲೊ ಇದ್ದರೂ ಮನಸ್ಸಿನ್ಯಾಗ ನಿನ್ನ ಭಾಳ ಪ್ರೀತಿಸ್ತಿದ್ರು. ಕನಸಿನ್ಯಾಗ... ಜ್ವರ ಹೆಚ್ಚಾದಾಗ 'ಪುಷ್ಪಾ... ಪುಷ್ಪಾ' ಅಂತ ಕನವರಸ್ತಿದ್ರು. ನಾನೂ... ಅದಕ್ಕ ಹೊಂದಕೊಂಡು ಬಿಟ್ಟೆ. ಯಾಕಂದ್ರ ಇದೊಂದ ಕಾರಣಾ